ದಿನಾಂಕ 02-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ 2 ನೇ ಎದುರುದಾರರ ಪರ ವಕೀಲರಿಂದಃ**

ನಾನು ಸಹಿ ಮಾಡಿರುವ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿದ್ದೇನೆ. ಅದರಲ್ಲಿರುವ ವಿಷಯಗಳು ಸರಿ ಇವೆ ಮತ್ತು ಇವು ನನ್ನ ಹೇಳಿಕೆಯ ಮೇರೆಗೆ ತಯಾರಿಸಲಾಗಿದೆ. ನಾನು ನನ್ನ ಅರ್ಜಿಯ ಜೊತೆ ಕೆಲವು ದಾಖಲಾತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನೋಡಿ ಗುರುತಿಸುತ್ತೇನೆ. ಸದರಿ ದಾಖಲಾತಿಗಳನ್ನು ಈ ಕೆಳಕಂಡಂತೆ ನಿಶಾನೆಗೊಳಪಡಿಸಲಾಯಿತು.

| | |
|---|---|
| ನಿಆರ್-1 | Authorization letter |
| ನಿಆರ್-2 | Policy |

ಆದ್ದರಿಂದ ಅರ್ಜಿಯನ್ನು ವಜಾ ಮಾಡಬೇಕಾಗಿ ಕೋರಿಕೆ.

**ಪಾಟೀ ಸವಾಲು - ಅರ್ಜಿದಾರರ ಪರ ವಕೀಲರಿಂದಃ**

ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ನ್ಯಾಯಲಯದಲ್ಲಿ ಆದ ಆದೇಶದ ಬಗ್ಗೆ ನನಗೆ ಮಾಹಿತಿ ಇದೆ. Sec 5 of Limitation Act ನಲ್ಲಿ ಆದ ಆದೇಶದಲ್ಲಿ ಅರ್ಜಿಯನ್ನು ನ್ಯಾಯಲಯ ಮನ್ನಿಸಲಾಗಿದೆ ಎಂದರೆ ಸರಿ . ಸದರಿ ಆದೇಶದ ವಿರುದ್ಧ ನಾವು Writ petition ಹಾಕಿರುತ್ತೇವೆ . Writ petition ನಂಬರ್ ನನಗೆ ಈಗ ನೆನಪಿಲ್ಲ . ನಮ್ಮ ವಿಮೆಗೆ ಒಳಪಟ್ಟ ವಾಹನದ ಚಾಲಕನ ವಿರುದ್ಧ ಪೊಲೀಸರು ಕಲಂ 122 , 177 ಐಎಂವಿ ಆಕ್ಟ್ ಅಡಿಯಲ್ಲಿ ದೋಷಾರೋಪಣಾ ಪತ್ರ ಸಲ್ಲಿಸಿರುತಾರೆ ಎಂದರೆ ಸಾಕ್ಷಿ ತಪ್ಪಾಗಿ ಹಾಕಿರುತ್ತಾರೆ ಎಂದು ತಿಳಿಸಿರುತ್ತಾರೆ . ಆ ಕ್ರಿಮಿನಲ್ ಪ್ರಕರಣದ ಸಿಸಿ ನಂ 1539/2022 ರಲ್ಲಿ ಲಾರಿಯ ಚಾಲಕ ತಪ್ಪು ಒಪ್ಪಿಕೊಂಡು ದಂಡ

ತುಂಬಿರುತಾನೆ ಎಂದರೆ ನನಗೆ ಗೊತ್ತಿಲ್ಲ . ಲಾರಿ ಚಾಲಕನ ವಿರುದ್ಧ ತಪ್ಪಾಗಿ ದೋಷಾರೋಪಣಾ ಪತ್ರ ಸಲ್ಲಿಸಿರುತ್ತಾರೆ ಎಂದು ನಾನು ಪೊಲೀಸ್ ಮೇಲಾಧಿಕಾರಿಗಳಿಗೆ ದೂರನ್ನು ಕೊಟ್ಟಿಲ್ಲ. ಲಾರಿ ಚಾಲಕ ಲಾರಿಯನ್ನು ತಪ್ಪಾಗಿ ರಸ್ತೆಯಲ್ಲಿ ಅಪಯಕಾರಿಯಾಗಿ ನಿಲ್ಲಿಸಿದ್ದರಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ಅಪಘಾತ ಲಾರಿ ಚಾಲಕನ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ. ಈ ಅರ್ಜಿಯು ಕಾಲಮಿತಿಯ ಒಳಗೆ ಆಗಿರುವುದರಿಂದ ಮತ್ತು ಸದ್ರಿ ಅರ್ಜಿಯನ್ನು ಪುರಸ್ಕರಿಸಿರುವುದರಿಂದ ಪುನಃ ಕಾಲಮಿತಿ ಬಗ್ಗೆ ಹೇಳಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ನ್ಯಾಯಲಯ ಪುರಸ್ಕರಿಸಿದ ಅರ್ಜಿಯನ್ನು ನಾವು ಯಾವುದೇ ನ್ಯಾಯಲಯದಲ್ಲಿ ಪ್ರಶ್ನಿಸಿಲ್ಲ ಎಂದರೆ ಸರಿಯಲ್ಲ. ನಮ್ಮ ಕಂಪೆನಿ ಅರ್ಜಿದಾರರಿಗೆ ಪರಿಹಾರ ಕೊಡಲು ಬಾಧ್ಯಸ್ಥರು ಎಂದರೆ ಸರಿಯಲ್ಲ. ನನಗೆ ಸಾಕ್ಷ್ಯ ನುಡಿಯಲು ಯಾವುದೇ ಅಧಿಕಾರ ನೀಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದರು

ಪ್ರ.ಹಿ.ಸಿ.ನ್ಯಾ ಮತ್ತು ಸಿ.ಜೆ.ಎಂ
ಉಡುಪಿ.